# ಹರಿನಾಮದರಗಿಣಿಯು ಹಾರುತಿದೆ ಜಗದಿ

1. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 588.
2. **Ref.:** Purandara Sahitya Darshana, Samputa 3, Samaja Darshana edited by Prof. S.K. Ramachandra Rao, page No. 324.
3. **Ref.:** Shri Purandara Dasara Sahitya Part – 3, Mahatmya Gnyana, edited by Shri Betageri Krishna Sharma and Shri Bengeri Huchha Rayaru, page No. 57.
4. **Note:** Lyrics given here are as per Ref. 1. The wordings in Ref. 2 are same as in Ref. 1. The wordings in Ref. 3 have same lyrics with minor variations, which are not considered here.
5. **Note:** Singer has followed these lyrics.

ರಾಗ: ಕಾಂಬೋದಿ ತಾಳ: ಆದಿ

ಹರಿನಾಮದರಗಿಣಿಯು ಹಾರುತಿದೆ ಜಗದಿ
ಪರಮ ಭಾಗವತರು ಬಲೆಯ ಬೀಸುವರು || ಪ ||

ಕೋಪವೆಂಬ ಮಾರ್ಜಾಲ ಕಂಡರೆ ನುಂಗುವುದು
ತಾಪವೆಂಬುವ ಹುಲಿಯು ಕೊಂಡೊಯ್ಯುವುದು
ಕಾಪಾಡಲದನೊಯ್ದು ಹೃದಯದೊಳಗಿಂಬಿಟ್ಟು
ಆಪತ್ತಿಗೊದಗುವುದು ಆ ಮುದ್ದು ಅರಗಿಣಿಯು || ೧ ||

ದಾರಿಯೊಳು ನಡೆವಾಗ ಚೋರರುಪಟಳವಿಲ್ಲ
ಮಾರಿ ಬಂದರೆ ಅದನು ಹೊಡೆದು ನೂಕುವುದು
ಕ್ರೂರ ಯಮ ಭಟರನ್ನು ಮೂಗು ರೆಕ್ಕೆಲಿ ಬಡಿದು
ದಾರಿ ತೋರುವುದು ಮುರಾರಿ ಪಟ್ಟಣಕೆ || ೨ ||

ಎಷ್ಟು ವರ್ಣಿಸಲಿ ನಾನೀ ಮುದ್ದು ಅರಗಿಣಿಯ
ಹೊಟ್ಟೆಯೊಳಗೀರೇಳು ಜಗವನಿಂಬಿಟ್ಟು
ಸೃಷ್ಟೀಶ ಪುರಂದರ ವಿಠಲನ ನೆನೆ ನೆನೆದು
ಮುಟ್ಟಿ ಭಜಿಸುವುದು ಈ ಮುದ್ದು ಅರಗಿಣಿಯು || ೩ ||

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ:**

**ಮಾರ್ಜಾಲ** = ಬೆಕ್ಕು

**ಮಾರಿ** = ಮೃತ್ಯು

**ಹೃದಯದೊಳಗೆ ಇಂಬಿಟ್ಟು** – ಮನಸ್ಸಿನಲ್ಲಿ ಪ್ರೀತಿಯಿಂದ ಕೂಡಿಟ್ಟರೆ.

**ಮುರಾರಿ ಪಟ್ಟಣಕೆ ದಾರಿ** – ಮುಕ್ತಿಗೆ, ವೈಕುಂಠಕ್ಕೆ, ದಾರಿಯಾದ ಜ್ಞಾನ, ಭಕ್ತಿ, ವಿರಕ್ತಿಗಳನ್ನು.

**ಈರೇಳು ಲೋಕವ** – ಹದಿನಾಲ್ಕು ಲೋಕಗಳನ್ನು.

**Classification:** Mundige
**Ankita:** purandara vittala
**Location:** NA
**Category:** Mahtmya Jyana
**Sub-Category:** Krishna, gili, loka, bhagavata, bekku, sittu, huli, hrudaya, dari, kalla, marana, yama, moogu, vaikunta, udara, bhajane,
**Pravachana:** NA
**Explanation:** NA